ತಿಳಿದಿದೆ.

ಈ ಸಲುವಾಗಿ ಸರ್ಕಾರವು ನಿಬಂಧಕರ ಅಧ್ಯಕ್ಷತೆಯಲ್ಲಿ ಅಧಿಕಾರಿಗಳನ್ನೊಳಗೊಂಡ ಸಮಿತಿಯನ್ನು ರಚಿಸಿ, ಅಧ್ಯಯನ ನಡೆಸಿ, ವರದಿ ಪಡೆದು ಅದರ ಪ್ರಕಾರ ಸಹಕಾರ ಸಂಘಗಳನ್ನು ಅವುಗಳ ವ್ಯವಹಾರದ ಆಧಾರದ ಮೇಲೆ ೨ ವಿಧಗಳಾಗಿ ವಿಂಗಡಿಸಿ ಪ್ರತ್ಯೇಕ ಸಿಬ್ಬಂದಿ ಬಲ ಮತ್ತು ವೇತನ ಶ್ರೇಣಿಗಳನ್ನು ಮಂಜೂರು ಮಾಡಿ ದಿನಾಂಕ,, ೩೧-೧೨-೧೯೯೧ ರಲ್ಲಿ ಆದೇಶವನ್ನು ಹೊರಡಿಸಿರುತ್ತದೆ.

ವಿಷಯ:- ರಾಜ್ಯದ ವಿವಿಧ ಸಹಕಾರ ಸಂಘ ಸಂಸ್ಥೆಗಳಲ್ಲಿ ೩ನೇ ಕ್ಲಾಸ್ ಹುದ್ದೆಗಳನ್ನು ತುಂಬುವ ಬಗ್ಗೆ ತಡೆಯಾಜ್ಞೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೯೮:- (೨೯೮)
ಶ್ರೀ ಆರ್. ದಯಾನಂದ ರಾವ್, (ಗಾಂಧಿನಗರ)
ಮಾನ್ಯ ಸಹಕಾರ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ವಿವಿಧ ಸಹಕಾರ ಸಂಘ ಸಂಸ್ಥೆಗಳಲ್ಲಿ ೩ನೇ ಕ್ಲಾಸ್ ಹುದ್ದೆಗಳನ್ನು ತುಂಬುವ ವಿಷಯದಲ್ಲಿ ತಡೆಯಾಜ್ಞೆ ಏನಾದರೂ ಇದೆಯೇ?
ಆ) ಹಾಗಿದ್ದಲ್ಲಿ ಈ ಸಂಘ ಸಂಸ್ಥೆಗಳಲ್ಲಿ ಮಂಜೂರಾಗಿರುವ ಹುದ್ದೆಗಳನ್ನು ತುಂಬದೇ ಇರುವುದರಿಂದ ಆಗಿರುವ ತೊಂದರೆಗಳು ಸರ್ಕಾರದ ಗಮನಕ್ಕೆ ಬಂದಿದೆಯೇ?
ಇ) ಸರ್ಕಾರವು ಹುದ್ದೆಗಳನ್ನು ತುಂಬುವ ಬಗೆಗಿನ ತಡೆಯಾಜ್ಞೆಯನ್ನು ಸಡಿಲಗೊಳಿಸಿದಿದ್ದಲ್ಲಿ ಈಗಾಗಲೇ ಮಂಜೂರಾಗಿರುವಂತಹ ೩ನೇ ಶ್ರೇಣಿ ಹುದ್ದೆಗಳನ್ನು ತುಂಬುವುದೇ

ಶ್ರೀ ಎಂ.ಮಲ್ಲಿಕಾರ್ಜುನಖರ್ಗೆ
(ಸಹಕಾರ ಸಚಿವರು)

ಹೌದು

ಇಲ್ಲ

ಅನಿವಾರ್ಯ ಸಂದರ್ಭಗಳಲ್ಲಿ ಹುದ್ದೆಗಳ ಅವಶ್ಯಕತೆಯನ್ನು ಪರಿಗಣಿಸಿ ಖಾಲಿ ಇರುವ ಹುದ್ದೆಗಳನ್ನು ತುಂಬಲು ಸರ್ಕಾರದಿಂದ ಅನುಮತಿ ನೀಡಲಾಗುತ್ತಿದೆ.

ವಿಷಯ:- ರಾಜ್ಯದ ಕಂದಾಯ ಇಲಾಖೆಯಲ್ಲಿ ಖಾಲಿ ಇರುವ ಭೂಮಾಪಕರ ಹುದ್ದೆ,

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೦೧:- (೪೬೦)
ಶ್ರೀ ಪಿ.ಜಿ.ಆರ್. ಸಿಂಧ್ಯಾ, (ಕನಕಪುರ)
ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಕಂದಾಯ ಇಲಾಖೆಯಲ್ಲಿ ಭೂಮಾಪಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?
ಆ) ಅವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು ಹಾಗು ಈ ಬಗ್ಗೆ ಸರ್ಕಾರದವರು ತೆಗೆದುಕೊಂಡ ಕ್ರಮಗಳೇನು?

ಶ್ರೀ ಎ೦. ರಾಜಶೇಖರಮೂರ್ತಿ
(ಕಂದಾಯ ಸಚಿವರು.)

ಹೌದು

ಕೊರತೆ ಇರುವ ಎರಡನೇ ದರ್ಜೆ ಭೂಮಾಪಕರುಗಳ ಹುದ್ದೆಗಳನ್ನು ಗುತ್ತಿಗೆ ಆಧಾರದ ಮೇಲೆ ಭರ್ತಿ ಮಾಡಲು ಕ್ರಮ ಕೈಗೊಂಡಿದ್ದು, ಅರ್ಹ ಅಭ್ಯರ್ಥಿಗಳ ಪಟ್ಟಿಯನ್ನು ತಯಾರಿಸಲಾಗಿದೆ. ಈ ಬಗ್ಗೆ ಕರ್ನಾಟಕ ಆಡಳಿತ ನ್ಯಾಯಮಂಡಳಿ ಬೆಂಗಳೂರು ವಿಭಾಗಕ್ಕೆ ಸಂಬಂಧಿಸಿದಂತೆ ಮಾತ್ರ ತಡೆ ಆಜ್ಞೆ ನೀಡಿರುವುದರಿಂದ ಮತ್ತು ಉಚ್ಚ ನ್ಯಾಯಾಲಯದಲ್ಲಿ ಎರಡು ರಿಟ್ ಅರ್ಜಿ ಬಾಕಿ ಇರುವುದರಿಂದ ಅಂತಿಮ ನೇಮಕಾತಿ ಆದೇಶ ಹೊರಡಿಸಲು ಸಾಧ್ಯವಾಗಿರುವುದಿಲ್ಲ. ನ್ಯಾಯಾಲಯದಲ್ಲಿ ಇರುವ ಪ್ರಕರಣಗಳು ಇತ್ಯರ್ಥವಾದ ನಂತರ ಹಾಗೂ ಇತರ ಸಾಧ್ಯತೆಗಳನ್ನು ಸಹ ಪರಿಶೀಲಿಸಿ ಮುಂದಿನ ಕ್ರಮವನ್ನು ಬೇಗನೆ ತೆಗೆದುಕೊಳ್ಳಲಾಗುವುದು.

ವಿಷಯ:- ರಾಜ್ಯದಿಂದ ಹೊರರಾಷ್ಟ್ರಗಳಿಗೆ ತೋಟಗಾರಿಕೆ ಉತ್ಪನ್ನಗಳ ಸಾಗಾಣಿಕೆ.

ಚುಕ್ಕೆ ಗುರ್ತಿಲ್ಲದ ಪ್ರಶ್ನೆ ಸಂಖ್ಯೆ ೧೦೨:- (೪೬೧)
ಶ್ರೀ ಪಿ.ಜಿ.ಆರ್.ಸಿಂದ್ಯಾ (ಕನಕಪುರ)
ಮಾನ್ಯ ತೋಟಗಾರಿಕೆ ಸಚಿವರು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಿಂದ ಹೊರರಾಷ್ಟ್ರಗಳಿಗೆ ತೋಟಗಾರಿಕೆ ಉತ್ಪನ್ನಗಳನ್ನು ಸಾಗಿಸುವ ಯೋಜನೆ ಸರ್ಕಾರದ ಗಮನದಲ್ಲಿದೆಯೇ?

ಆ) ಹಾಗಿದ್ದಲ್ಲಿ, ಅದರ ಬಗ್ಗೆ ವಿವರಗಳನ್ನು ಕೊಡುವುದು?

ಶ್ರೀ ಎ.ಕೃಷ್ಣಪ್ಪ
(ತೋಟಗಾರಿಕಾ ಸಚಿವರು)

ಇದೆ.

ತೋಟದ ಬೆಳೆಗಾರರ ಸಹಕಾರಿ ಮಾರಾಟ ಮತ್ತು ಸಂಸ್ಕರಣ ಸಂಘವು ರೈತರ ಹಾಗೂ ಗ್ರಾಹಕರ ಹಿತ ರಕ್ಷಣೆಗಾಗಿ ತೋಟಗಾರಿಕೆ ಇಲಾಖೆಯ ಆಶ್ರಯದಲ್ಲಿ ಕಾರ್ಯನಿರ್ವಹಿಸುತ್ತಿದೆ. ಸಂಘವು ರಾಜ್ಯದಿಂದ ಹೊರ ದೇಶಗಳಿಗೆ ಹಣ್ಣು ಮತ್ತು ತರಕಾರಿಗಳನ್ನು ರಫ್ತು ಮಾಡುವ ಯೋಜನೆಯನ್ನು ಹೊಂದಿದೆ. ಇದಕ್ಕೆ ಬೇಕಾದ ಪರವಾನಿಗೆ, ಆರ್.ಬಿ.ಐ. ಕೋಡ್ ಸಂಖ್ಯೆ ಇತ್ಯಾದಿಗಳನ್ನು ಪಡೆದಿದೆ. ಮತ್ತು ಅಪೇಡಾ (ಕೃಷಿ ಮತ್ತು ಸಂಸ್ಕರಿಸಿದ ಆಹಾರ ಪದಾರ್ಥಗಳ ರಫ್ತು ಅಭಿವೃದ್ಧಿ ಪ್ರಾಧಿಕಾರ) ಭಾರತ ಸರ್ಕಾರ ಇದರೊಂದಿಗೆ ತನ್ನ ಹೆಸರನ್ನು ನೋಂದಾಯಿಸಿಕೊಂಡಿದೆ. ಸಂಘವು ರಫ್ತಿಗಾಗಿ ಒಂದು ಪ್ರತ್ಯೇಕ ವಿಭಾಗವನ್ನು ಹೊಂದಲು ನಿಶ್ಚಯಿಸಿದ್ದು ಇದಕ್ಕೆ ಬೇಕಾದ ಮೂಲಭೂತ ಸೌಲಭ್ಯಗಳಾದ ಎಂಗಡಣೆ: ವರ್ಗೀಕರಣ: ನಿರ್ಮಲೀಕರಣ: ಮೇಣಲೇಪನ ಮತ್ತು ಪ್ಯಾಕಿಂಗ್ ಘಟಕಗಳು, ಶೀತಲ ಕೊಠಡಿಗಳು ಶೀಖರಣಾ ಪೂರ್ವ ಶೀತಲೀಕರಣ ಘಟಕಗಳು. ಶೀತನಗೃಹಗಳು, ಆವಾಹಕ ಕವಚದ ವಾಹನಗಳನ್ನು ಮತ್ತು ಶೀತನ ವ್ಯವಸ್ಥೆ ಇರುವ ವಾಹನಗಳನ್ನು ಕೊಳ್ಳಲು ರೂ. ೧೪೭೪.೯೧ ಲಕ್ಷಗಳ ಯೋಜನೆಯನ್ನು ರೂಪಿಸಿ ಭಾರತ ಸರ್ಕಾರಕ್ಕೆ ಸಲ್ಲಿಸಲು ಪರಿಶೀಲಿಸಲಾಗುತ್ತಿದೆ.

ವಿಷಯ:- ಗ್ರಾಮಾಂತರ ಪ್ರದೇಶಗಳಿಗೆ ಜವಾಹರ ರೋಜಗಾರ್ ಯೋಜನೆ ವಿಸ್ತರಣೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ ೧೦೪:- (೪೬೫)
ಶ್ರೀ ಡಿ.ಆರ್.ಪಾಟೀಲ (ಗದಗ)
ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗ್ರಾಮಾಂತರ ಪ್ರದೇಶದಲ್ಲಿ ಹೆಚ್ಚು ಉದ್ಯೋಗಾವಕಾಶ ಸೃಷ್ಟಿಸುವ ಜೈವಿಕ